## ಸುದ್ದಿ ಸಿಂಚನ

### ಲೋಕಸಭಾ ಚುನಾವಣೆ: ಪೊಲೀಸರ ಪಥ ಸಂಚಲನ

ಚನ್ನಪಟ್ಟಣ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಚನ್ನಪಟ್ಟಣ ನಗರ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಅರೆ ಸೇನಾಪಡೆ ಹಾಗೂ ಪೊಲೀಸರು ಪಥಸಂಚಲನ ನಡೆಸಿದರು. ಎಎಸ್‌ಪಿ ವೆಂಕಟೇಶಯ್ಯ, ಡಿವೈಎಸ್‌ಪಿ ಗಿರಿ ನೇತೃತ್ವದಲ್ಲಿ ಅರಸೇನಾಪಡೆಯ ಯೋಧರು ಹಾಗೂ ನೂರಾರು ಪೊಲೀಸರು ನಗರದ ಡೂಮ್‌ಲೈಟ್ ಸರ್ಕಲ್, ಪೋಸ್ಟ್ ಆಫೀಸ್ ರಸ್ತೆ, ಚರ್ಚ್ ರಸ್ತೆ, ಎಂಜಿ ರೋಡ್ ಸೇರಿದಂತೆ ಕೆಲ ಪ್ರಮುಖ ರಸ್ತೆಗಳಲ್ಲಿ ಸಂಚಲನ ನಡೆಸಿ, ಸಾರ್ವಜನಿಕರಿಗೆ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ನಗರ ವೃತ್ತ ನಿರೀಕ್ಷಕ ರವಿಕಿರಣ್, ಪಿಎಸ್‌ಐ ಹರೀಶ್, ಪೂರ್ವ ಪೊಲೀಸ್ ಠಾಣಯ ಸಿಬ್ಬಂದಿ, ಟ್ರಾಫಿಕ್ ಪೊಲೀಸ್‌ಸಿಬ್ಬಂದಿ ಉಪಸ್ಥಿತರಿದ್ದರು.

### ಕನ್ನಡ ಶಾಲೆಗಳ ಕುರಿತು ಆಸಕ್ತಿ ವಹಿಸಿ: ಶೈಲಜಾ



ದಾಬಸ್‌ಪೇಟೆ: ಗ್ರಾಮೀಣ ಭಾಗದ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಓದಿ ಕಲಿತವರು ಇಂದು ಲೋಕಸೇವಾ ಆಯೋಗದಲ್ಲಿ ಹೆಚ್ಚು ಹುದ್ದೆ ಗಳಿಸಿರುವುದು ಹೆಮ್ಮೆಯ ಸಂಗತಿ. ಗ್ರಾಮೀಣರು ಕನ್ನಡ ಶಾಲೆಗಳ ಬಗ್ಗೆ ಆಸಕ್ತಿ ವಹಿಸಿ, ಅವುಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಶೈಲಜಾ ಹೇಳಿದರು. ತ್ಯಾಮಗೊಂಡ್ಲು ಹೋಬಳಿಯ ಲಕ್ಕಸಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರಕಾರಿ ಶಾಲೆಯಲ್ಲಿ ಅರ್ಹ ಶಿಕ್ಷಕರಿರುತ್ತಾರೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಾರೆ. ಅದನ್ನು ಗ್ರಾಮಸ್ಥರು ಬಳಸಿಕೊಳ್ಳಬೇಕು. ಸತತ 37 ವರ್ಷದಿಂದ ಸೇವೆ ಸಲ್ಲಿಸಿರುವ ಶಾಲೆಯ ಮುಖ್ಯ ಶಿಕ್ಷಕ ಕೃಶ್ಣಪ್ಪ ಅವರ ಕಾರ್ಯವೈಖರಿಗೆ ಅವರೇ ಸಾಟಿ ಎಂದು ಪ್ರಶಂಸಿಸಿದರು. ಮುಖ್ಯ ಶಿಕ್ಷಕ ಕೃಷ್ಣಪ್ಪ ಮಾತನಾಡಿ, ನಮ್ಮ ಗ್ರಾಮದ ಮಕ್ಕಳು ಯಾವುದೇ ಖಾಸಗಿ ಶಾಲೆ ವಿದ್ಯಾರ್ಥಿಗಳಿಗೆ ಕಡಿಮೆಯಿಲ್ಲದಂತೆ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಯಲ್ಲಿ ತೊಡಗಿರುವುದು ನೈಜ ಗುಣಾತ್ಮಕ ಶಿಕ್ಷಣ ಅನಾವರಣಗೊಳಿಸಿದೆ ಎಂದರು. ಸಮಾರಂಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಸಣ್ಣಗುಡ್ಡಯ್ಯ, ವೈದ್ಯ ಶಿಕ್ಷಕ ಶಂಕರಪ್ಪ, ಸಿಆರ್‌ಪಿ ಲಕ್ಷ್ಮಿಕಾಂತ್, ಶಿಕ್ಷಕರಾದ ಕೃಷ್ಣಮೂರ್ತಿ, ವಿರೂಪಾಕ್ಷಯ್ಯ, ಅನಿತಾಲಕ್ಷ್ಮಿ, ಪ್ರಕಾಶ್, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು, ಸ್ಥಳೀಯರು ಹಾಜರಿದ್ದರು.

# ಕೈ ಕೋಟೆಯಲ್ಲಿ ಕಮಲ ಅರಳಿಸಲು ಚಾಣಕ್ಯನ ಎಂಟ್ರಿ!

## ಏಪ್ರಿಲ್ 2ರಂದು ಬೆಂಗಳೂರಲ್ಲಿ ಸಭೆ, ಚನ್ನಪಟ್ಟಣದಲ್ಲಿ ರೋಡ್ ಶೋ | ಡಿಕೆ ಸಹೋದರರ ತವರು ಜಿಲ್ಲೆಯಿಂದಲೇ ಮೊಳಗಲಿದೆ ರಣಕಹಳೆ

• ಎಂ.ಅಫ್ರೋಜ್ ಖಾನ್
**ಕನ್ನಡಪ್ರಭ ವಾರ್ತೆ** ರಾಮನಗರ

ಜಿದ್ದಾಜಿದ್ದಿಗೆ ಸಾಕ್ಷಿಯಾಗಲಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಭದ್ರಕೋಟೆಯನ್ನು ಬೇಧಿಸಿ ಕಮಲ ಅರಳಿಸಲು ಬಿಜೆಪಿಯ ಚಾಣಕ್ಯ ಅಮಿತ್ ಶಾ ಆದಿಯಾಗಿ ದೆಹಲಿ ನಾಯಕರ ದಂಡು ಎಂಟ್ರಿ ಕೊಡಲು ತಯಾರಿ ನಡೆದಿದೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ - ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಗೆಲುವಿನ ದೃಷ್ಟಿಯಿಂದ ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಿಸಿ, ಪಕ್ಷವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಅಮಿತ್ ಶಾ ಭೇಟಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

ಮೈತ್ರಿ ಅಭ್ಯರ್ಥಿ ಡಾ.ಸಿ.ಎನ್ .ಮಂಜುನಾಥ್ ಏಪ್ರಿಲ್ 4ರಂದು ಉಮೇದುವಾರಿಕೆ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಅದಕ್ಕೂ ಮುನ್ನವೇ ಬಿಜೆಪಿ ಚಾಣಕ್ಯ ಅಮಿತ್ ಶಾ ಕ್ಷೇತ್ರಕ್ಕೆ ಭೇಟಿ ನೀಡುವ ಕಾರ್ಯಕ್ರಮ ನಿಗದಿ ಪಡಿಸಿಕೊಂಡಿದ್ದಾರೆ. ಏಪ್ರಿಲ್ 2ರಂದು ಬೆಂಗಳೂರಿನಲ್ಲಿ ಬ್ಯಾಕ್ ಟು ಬ್ಯಾಕ್ ಸಭೆಗಳನ್ನು ನಡೆಸಲಿದ್ದು, ಆನಂತರ ಚನ್ನಪಟ್ಟಣ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಭರ್ಜರಿ ರೋಡ್ ಶೋ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಕಾಂಗ್ರೆಸ್ ಹಾಗೂ ಮಾಜಿ ಪ್ರಧಾನಿ ದೇವೇಗೌಡರವರ ಅಳಿಯ ಡಾ.ಸಿ.ಎನ್.ಮಂಜುನಾಥ್ ಬಿಜೆಪಿ ಅಭ್ಯರ್ಥಿಗಳಾಗಿ ಕಣಕ್ಕಿಳಿದಿರುವುದರಿಂದ ತೀವ್ರ ಪೈಪೋಟಿ ನಡೆದಿದೆ. ಇದೀಗ ಬಿಜೆಪಿಯ ದೆಹಲಿ ನಾಯಕರ ಎಂಟ್ರಿಯಿಂದ ಚುನಾವಣಾ ಅಖಾಡ ಮತ್ತಷ್ಟು ರಂಗೇರಲಿದೆ.


ಈಗಾಗಲೇ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ರವರು ನಾಮಪತ್ರ ಸಲ್ಲಿಕೆ ವೇಳೆಯೇ ಶಕ್ತಿ ಪ್ರದರ್ಶನ ತೋರಿಸಿದ್ದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಅನೇಕ ಕಾಂಗ್ರೆಸ್ ನಾಯಕರು ಒಂದು ಸುತ್ತಿನ ಚುನಾವಣಾ ಪ್ರಚಾರ ನಡೆಸಿ ಹೋಗಿದ್ದಾರೆ.

ಬಿಜೆಪಿ ನಾಯಕ ಅಮಿತ್ ಶಾರವರು ಡಿ.ಕೆ. ಸಹೋದರರ ತವರು ಜಿಲ್ಲೆಯಿಂದಲೇ ಲೋಕಸಭಾ ಚುನಾವಣೆಗೆ ರಣಕಹಳೆ ಮೊಳಗಿಸಲು ನಿರ್ಧರಿಸಿದ್ದಾರೆ. ಇದರ ಹಿಂದೆ ಹಳೇ ಮೈಸೂರು ಭಾಗದ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಕ್ಷೇತ್ರಗಳ ಕುರಿತಾಗಿಯೂ ರಣತಂತ್ರ ಹಣೆಯುವ ಕಾರ್ಯವೂ ಅಡಗಿದೆ.

ಬೆಂಗಳೂರಲ್ಲಿ ಪಕ್ಷದ ನಾಯಕರೊಂದಿಗೆ ಸಭೆ ನಡೆಸಲಿರುವ ಅಮಿತ್ ಶಾರವರು ಸಂಜೆ ಚನ್ನಪಟ್ಟಣದಲ್ಲಿ ರೋಡ್ ಶೋ ಮೂಲಕ ಶಕ್ತಿ ಪ್ರದರ್ಶನ ಮಾಡಲಿದ್ದಾರೆ.ಈ ರೋಡ್ ಶೋನಲ್ಲಿ ಬಿಜೆಪಿ ಜೊತೆಗೆ ಜೆಡಿಎಸ್ ನಾಯಕರು ಭಾಗಿಯಾಗಲಿದ್ದಾರೆ.

ಅಮಿತ್ ಶಾ ಅವರು ರೋಡ್ ಶೋ ಮೂಲಕ ಮತ ಬೇಟೆ ನಡೆಸಿ ತೆರಳಿದ ನಂತರ ಬಿಜೆಪಿಯ ದೆಹಲಿ ನಾಯಕರು ಕ್ಷೇತ್ರಕ್ಕೆ ಲಗ್ಗೆ ಇಡಲಿದ್ದಾರೆ.

### ಚನ್ನಪಟ್ಟಣಕ್ಕೆ 2ನೇ ಬಾರಿ ಅಮಿತ್ ಶಾ ಭೇಟಿ



2019ರ ವಿಧಾನಸಭಾ ಚುನಾವಣೆ ವೇಳೆ ಬಿಜೆಪಿ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರವಾಗಿ ಚುನಾವಣಾ ಪ್ರಚಾರ ನಡೆಸಲು ಬಿಜೆಪಿ ನಾಯಕ ಅಮಿತ್ ಶಾ ಚನ್ನಪಟ್ಟಣಕ್ಕೆ ಭೇಟಿ ನೀಡಿದ್ದರು. ಆಗ ಬೃಹತ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ್ದರು. ಆದರೆ, ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ, ಜೆಡಿಎಸ್ ವರಿಷ್ಠರಾದ ಕುಮಾರಸ್ವಾಮಿ ಎದುರು ಯೋಗೇಶ್ವರ್ ಅವರು ಪರಾಭವಗೊಂಡಿದ್ದರು. ಈಗ 2024ರ ಲೋಕಸಭಾ ಚುನಾವಣೆಯ ಪ್ರಚಾರಕ್ಕೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರವನ್ನೇ ಅಮಿತ್ ಶಾ ಆಯ್ಕೆ ಮಾಡಿಕೊಂಡಿದ್ದಾರೆ. ಕ್ಷೇತ್ರದ ಶಾಸಕರಾಗಿರುವ ಕುಮಾರಸ್ವಾಮಿಯವರು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದಾರೆ. ಇಂತಹ ಸಮಯದಲ್ಲಿ ಅಮಿತ್ ಶಾ ಚನ್ನಪಟ್ಟಣದಲ್ಲಿಯೇ ರೋಡ್ ಶೋ ಹಮ್ಮಿಕೊಂಡಿರುವುದು ತೀವ್ರ ಕುತೂಹಲ ಮೂಡಿಸಿದೆ.

# ಸುರೇಶರ ಸೋಲಿಸಬೇಕೆಂದು ಬಾಲಕೃಷ್ಣ ಆಸೆ

## ಸಮ್ಮಿಲನ ಸಭೆಯಲ್ಲಿ ಬಾಂಬ್ ಸಿಡಿಸಿದ ಯೋಗೇಶ್ವರ್ | ಮಂಜುನಾಥ್ ಪರ ಮತಯಾಚನೆ

• **ಕನ್ನಡಪ್ರಭ ವಾರ್ತೆ** ಮಾಗಡಿ

ಸಂಸದ ಸುರೇಶ್ ಅವರ ದರ್ಪ ದೌರ್ಜನ್ಯವನ್ನು ಶಾಸಕ ಬಾಲಕೃಷ್ಣರವರೇ ಸಹಿಸಲು ಆಗುತ್ತಿಲ್ಲ. ಅವರ ಹೃದಯದಲ್ಲಿ ಡಿ.ಕೆ.ಸುರೇಶ್ ಅವರನ್ನು ಸೋಲಿಸಬೇಕೆಂಬ ಧ್ಯೇಯ ಇಟ್ಟುಕೊಂಡು ಮೇಲ್ನೋಟಕ್ಕೆ ಅವರ ಪರ ಚುನಾವಣೆ ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಸಿಪಿ ಯೋಗೇಶ್ವರ್‌ಹೊಸ ಬಾಂಬ್ ಹಾಕಿದರು.

ಪಟ್ಟಣದಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಡಾ.ಮಂಜುನಾಥ್ ಪರ ಮತಯಾಚಿಸಿ ಮಾತನಾಡಿ, ಡಿ.ಕೆ.ಸುರೇಶ್ ದುರಹಂಕಾರ ಹೆಚ್ಚಾಗಿದ್ದು, ಈ ಬಾರಿ ಚುನಾವಣೆಯಲ್ಲಿ 600 ಕೋಟಿ ಹಣವಿದೆ ಎಂದು ಘೋಷಣೆ ಮಾಡಿಕೊಂಡಿದ್ದಾರೆ. ಅವರ ಬಳಿ ಆರು ಸಾವಿರ ಕೋಟಿ ಲೆಕ್ಕವಿಲ್ಲದ ಹಣವಿದೆ. ಹಣದ ಮೂಲಕ ಚುನಾವಣೆ ಗೆಲ್ಲುತ್ತೇವೆ ಎಂಬ ಭ್ರಮೆಯಲ್ಲಿ ಅಣ್ಣ-ತಮ್ಮಂದಿರಿದ್ದು ಈ ಬಾರಿ ನಾನು, ಮುನಿರತ್ನ, ಎಚ್ ಡಿ ಕುಮಾರಸ್ವಾಮಿ, ಮಂಜುನಾಥ್ ಸೇರಿ ಸಂಸದರನ್ನು ಸೋಲಿಸಿಯೇ ತೀರುತ್ತೇವೆ ಎಂದು ಸಿ.ಪಿ.ಯೋಗೇಶ್ವರ್ ಸವಾಲೆಸೆದರು.

ಡಾ.ಮಂಜುನಾಥ್ ಅವರ ಆರೋಗ್ಯ ಸೇವೆಯ ಮಾದರಿಯನ್ನು ಅಮೆರಿಕದ ಮಾಜಿ ಅಧ್ಯಕ್ಷ ಒಬಾಮರವರು ಒಬ್ಬ ಹೆಲ್ತ್ ಕೇರ್‌ಎಂದು ಡಾ. ಮಂಜುನಾಥ್ ಅವರ ಯೋಜನೆಯನ್ನು ನಕಲು ಮಾಡಿ ಅಲ್ಲಿನ ಜನಗಳಿಗೆ ಉತ್ತಮ ಆರೋಗ್ಯ ಕೊಡುವ ಕೆಲಸ ಮಾಡಿದ್ದಾರೆ.ಡಾ.ಮಂಜುನಾಥ್‌ರಸೇವೆವಿದೇಶದಲ್ಲೂ ಪ್ರಖ್ಯಾತಿ ಪಡೆದಿತ್ತು. ಇಂತಹ ಅಭ್ಯರ್ಥಿಗೆ ಲೋಕಸಭಾ ಚುನಾವಣೆಯಲ್ಲಿ ಅವಕಾಶ ನೀಡಿದರೆ ದೇಶಕ್ಕೆ ಆರೋಗ್ಯ ಸೇವೆಗೆ ಒಂದು ಬದಲಾವಣೆ ಸಿಗಲಿದೆ. ಈ ಚುನಾವಣೆ ಧರ್ಮಗಳ ನಡುವಿನ ಚುನಾವಣೆಯಾಗಿದ್ದು ಎಲ್ಲಾ ಸರ್ವರ್‌ಗಳಲ್ಲೂ ಡಾ.ಮಂಜುನಾಥ್ ಗೆಲ್ಲುತ್ತಾರೆ ಎಂಬ ಸಮೀಕ್ಷೆ ಹೇಳಿದೆ. ಕನಕಪುರ ಕ್ಷೇತ್ರದಲ್ಲಿ ನೀಡುವ ಲೀಡನ್ನು, ಚನ್ನಪಟ್ಟಣ ಕ್ಷೇತ್ರದಲ್ಲಿ ಅಷ್ಟೇ ಲೀಡನ್ನು ಕೊಡುತ್ತೇವೆ. ಉಳಿದ ಏಳು ವಿಧಾನಸಭಾ ಕ್ಷೇತ್ರದಲ್ಲೂ ಮಂಜುನಾಥ್ ಅವರಿಗೆ ಹೆಚ್ಚಿನ ಲೀಡ್ ಬರುವುದರಿಂದ ಸಂಸದರಾಗಿ ಆಯ್ಕೆಯಾಗುತ್ತಾರೆ ಎಂದು ಸಿ.ಪಿ.ಯೋಗೇಶ್ವರ್‌ಭವಿಷ್ಯ ನುಡಿದರು.



ಮಾಗಡಿಯಲ್ಲಿ ಜೆಡಿಎಸ್-ಬಿಜೆಪಿ ಕಾರ್ಯಕರ್ತರ ಸಮ್ಮಿಲನ ಕಾರ್ಯಕ್ರಮದಲ್ಲಿ ಎನ್‌ಡಿಎ ಮೈತ್ರಿ ಅಭ್ಯರ್ಥಿ ಡಾ. ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಎ.ಮಂಜುನಾಥ್ ಮಾತನಾಡಿ, ಐದು ವರ್ಷದಲ್ಲಿ ತಮ್ಮ ಸಂಪತ್ತು ಎರಡು ಪಟ್ಟು ಏರಿಕೆಯಾಗುತ್ತದೆ ಎಂದರೆ ಯಾವ ರೀತಿ ಬಿಸಿನೆಸ್ ಮಾಡುತ್ತಿದ್ದಾರೆ ಎಂಬುದನ್ನು ನಮ್ಮ ಜನತೆಗೆ ತಿಳಿಸಿದರೆ ನಾವು ಕೂಡ ಅದೇ ಬಿಸಿನೆಸ್ ಮಾಡುತ್ತೇವೆ. 600 ಕೋಟಿ ಹಣವಿದೆಯೆಂದು ಘೋಷಣೆ ಮಾಡಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ 300 ಕೋಟಿ ಹಣವಿದೆ ಎಂದು ಘೋಷಣೆ ಮಾಡಿದ್ದರು. ಐದು ವರ್ಷ ಸರ್ಕಾರವಿಲ್ಲದಿದ್ದರೂ ಕೇವಲ ರಾಜ್ಯದಲ್ಲಿ ಒಂದು ವರ್ಷ ಕಾಂಗ್ರೆಸ್ ಸರ್ಕಾರ ಇದ್ದಾಗ ಇವರ ಹಣ ದುಪ್ಪಟ್ಟಾಗಿದೆ ಎಂದು ಸಂಸದ ಡಿಕೆ ಸುರೇಶ್ ವಿರುದ್ಧ ವಾಗ್ದಾಳಿ ನಡೆಸಿದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಬಿಜೆಪಿ ಯುವ ಮುಖಂಡ ಪ್ರಸಾದ್ ಗೌಡ ಮಾತನಾಡಿದರು. ಲಕ್ಷ್ಮೀಮಂಜುನಾಥ್, ಜೆಡಿಎಸ್ ಮುಖಂಡ ಸುಬ್ಬಶಾಸ್ತ್ರಿ, ಪುರಸಭಾ ಸದಸ್ಯರು, ಜೆಡಿಎಸ್, ಬಿಜೆಪಿ ಮುಖಂಡರು ಭಾಗವಹಿಸಿದ್ದರು.

# ವೈದ್ಯಕೀಯ ಕ್ಷೇತ್ರವನ್ನು ಅರ್ಧಕ್ಕೆ ಬಿಟ್ಟು ಬಂದಿಲ್ಲ

## ಎನ್‌ಡಿಎ ಅಭ್ಯರ್ಥಿ ಡಾ.ಮಂಜುನಾಥ್ ಸ್ಪಷ್ಟನೆ



ಮಾಗಡಿ: ವೈದ್ಯಕೀಯ ಕ್ಷೇತ್ರದಲ್ಲಿ 65 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದೇನೆ. ವೈದ್ಯಕೀಯ ಕ್ಷೇತ್ರವನ್ನು ಅರ್ಧಕ್ಕೆ ನಿಲ್ಲಿಸಿ ರಾಜಕಾರಣಕ್ಕೆ ಬಂದಿಲ್ಲ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಮಂಜುನಾಥ್ ವಿರೋಧ ಪಕ್ಷದವರಿಗೆ ಟಾಂಗ್ ನೀಡಿದರು.

ಜೆಡಿಎಸ್, ಬಿಜೆಪಿ ಕಾರ್ಯಕರ್ತರ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರು ವೈದ್ಯ ವೃತ್ತಿಯನ್ನೇ ಮಾಡಬೇಕು, ರಾಜಕಾರಣ ಮಾಡಬಾರದು ಎಂಬ ವಿರೋಧಿಗಳ ಹೇಳಿಕೆಗೆ ಉತ್ತರಿಸಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ. ಅರ್ಧಕ್ಕೆ ನಿಲ್ಲಿಸಿ ರಾಜಕಾರಣಕ್ಕೆ ಬಂದಿಲ್ಲ. ಕ್ರಿಕೆಟ್‌ನಲ್ಲಿಹೊಸದಾಗಿಬಂದಆಟಗಾರರೇ 200 ರನ್ನು ಹೊಡೆದಿರುವ ಉದಾಹರಣೆಗಳಿದೆ. ಅನುಭವ ಇರುವ ಆಟಗಾರ ಸೊನ್ನೆಗೆ ಔಟ್ ಆಗಿದ್ದಾರೆ. ಕ್ಷೇತ್ರದ ಪರಿಚಯ ಮಾಡಿಕೊಳ್ಳುತ್ತಿದ್ದು ನನ್ನದೇ ಆದ ಕಲ್ಪನೆಯ ಮೂಲಕ ಕ್ಷೇತ್ರದ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಶೀಘ್ರದಲ್ಲೇ ಪಟ್ಟಿ ಬಿಡುಗಡೆ ಮಾಡುತ್ತೇನೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಸಾಧಕರನ್ನು ಗುರುತಿಸಿ ಅವರ ಸಾಧನೆಯ ಆಧಾರದ ಮೇಲೆ ಅವಕಾಶ ಕೊಡುತ್ತಿದ್ದಾರೆ. ಅಮೆರಿಕಮತ್ತುಇಂಗ್ಲೆಂಡ್‌ನಲ್ಲಿಪರಿಣಿತರಿಗೆ ಹೆಚ್ಚಿನ ಅವಕಾಶ ಕೊಡುವ ರೀತಿ ಮೋದಿ ಕೂಡ ಅನುಭವ ಇರುವವರನ್ನು ರಾಜಕಾರಣದಲ್ಲಿ ಬೆಳೆಸುತ್ತಿದ್ದು ನಾನು ಕೂಡ ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರಬೇಕೆಂಬ ಅಪೇಕ್ಷೆಯಿಂದ ಬಂದಿದ್ದೇನೆ. ಯಾವ ರೀತಿ ಅವಕಾಶಗಳು ಸಿಗುತ್ತದೆ ಕಾದು ನೋಡಬೇಕಿದೆ. ಕ್ಷೇತ್ರದ ಮತದಾರರು ಈ ಬಾರಿ ಬಿಜೆಪಿ ಪಕ್ಷಕ್ಕೆ ಆಶೀರ್ವಾದ ನೀಡುತ್ತಾರೆಂಬ ವಿಶ್ವಾಸವಿದೆ ಎಂದರು.

ನಾನು ನಿರ್ದೇಶಕನಾಗಿ ಆಸ್ಪತ್ರೆಯಲ್ಲಿ ಕೂರದೆ ಪ್ರತಿದಿನ ಜನಗಳ ಸಂಪರ್ಕದಿಂದ ನನ್ನ ಅವಧಿಯಲ್ಲಿ ಎರಡು ಕೋಟಿ ಜನರನ್ನು ಆಸ್ಪತ್ರೆಯಲ್ಲಿ ಜನತಾದರ್ಶನ ಮಾಡಿದ್ದು 10 ಸಾವಿರ ಹೆಜ್ಜೆಗಳನ್ನು ಹಾಕುತ್ತಿದ್ದೆ. ಅದರಲ್ಲಿ5 ಸಾವಿರ ಹೆಜ್ಜೆ ಆಸ್ಪತ್ರೆ ಕಾರಿಡಾರ್ ನಲ್ಲೇ ಆಗುತ್ತಿತ್ತು ಎಂದು ಹೇಳಿದರು.

# ಕಾಂಗ್ರೆಸ್ ಸೇರ್ಪಡೆ ಖಚಿತ ಪಡಿಸಿದ ನಿಶಾ

## ವಿಧಾನ ಪರಿಷತ್ ಸದಸ್ಯ ಯೋಗೇಶ್ವರ್‌ಪುತ್ರಿ, ನಿಶಾ ಅಧಿಕೃತ ಘೋಷಣೆ

• **ಕನ್ನಡಪ್ರಭ ವಾರ್ತೆ** ರಾಮನಗರ

ಕಾಂಗ್ರೆಸ್ ಪಾಳಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಬಿಜೆಪಿ ನಾಯಕರಾದ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್‌ಪುತ್ರಿ ನಿಶಾ ಯೋಗೇಶ್ವರ್ ಸದ್ಯದಲ್ಲೇ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುವುದಾಗಿ ಅವರೇ ಅಧಿಕೃತವಾಗಿ ಘೋಷಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೆಲ ತಿಂಗಳ ಹಿಂದಷ್ಟೇ ನಿಶಾ ಯೋಗೇಶ್ವರ್ ಭೇಟಿ ಮಾಡಿದ್ದರು. ಬಳಿಕ ಬಿಎಂಐಸಿಪಿ ಅಧ್ಯಕ್ಷರಾಗಿ ಚನ್ನಪಟ್ಟಣ ಕಾಂಗ್ರೆಸ್ ಮುಖಂಡ ರಘುನಂದನ್ ರಾಮಣ್ಣ ಅಧಿಕಾರ ಸ್ವೀಕಾರದ ಸಮಯದಲ್ಲಿ ಸಹ ಸಂಸದ ಡಿ.ಕೆ.ಸುರೇಶ್ ಜೊತೆಗೆ ನಿಶಾ ಕಾಣಿಸಿಕೊಂಡಿದ್ದು ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ನಿಶಾ ಯೋಗೇಶ್ವರ್, ಚನ್ನಪಟ್ಟಣದಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದೇನೆ. ಸೇರ್ಪಡೆ ದಿನಾಂಕ ಇನ್ನೂ ನಿಗದಿಯಾಗಿಲ್ಲ. ನನ್ನ ಸೇರ್ಪಡೆಯಿಂದ ಯಾರಿಗೆ ಲಾಭವಾಗುತ್ತದೋ ಗೊತ್ತಿಲ್ಲ. ಸೇರ್ಪಡೆಯಾದ ಬಳಿಕ ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

**ನನ್ನ ತಂದೆ ಸಹಮತವೂ ಇದೆ:** ನಾನು ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗುವುದಕ್ಕೆ ನನ್ನ ತಂದೆಯ ಸಹಮತವಿದೆ. ಅವರಿಗೆ ಗೊತ್ತಿದ್ದೇ ನಾನು ಕಾಂಗ್ರೆಸ್ ಸೇರುತ್ತಿದ್ದೇನೆ. ಕಾಂಗ್ರೆಸ್ ಪಕ್ಷ ಸೇರುವ ಸ್ವಾತಂತ್ರ್ಯ ನನಗೆ ಕೊಟ್ಟಿದ್ದಾರೆ. ಇದರಿಂದ ಯಾರಿಗೆ ಲಾಭ, ಯಾರಿಗೆ ನಷ್ಟ ಗೊತ್ತಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ನನ್ನ ತಂದೆಯವರು ಸ್ವತಂತ್ರ್ಯವಾಗಿ ರಾಜಕಾರಣ ಮಾಡಿದವರು.

ನನ್ನ ರಾಜಕೀಯ ಬೆಳವಣಿಗೆಗೂ ಅವರು ಅಡ್ಡಿಪಡಿಸುವುದಿಲ್ಲ. ನನಗೆ ಕಾಂಗ್ರೆಸ್ ಸೇರುವುದು ಒಳ್ಳೆಯದು ಅನಿಸುತ್ತಿದೆ. ಅದರಿಂದಾಗಿ ನಾನು ಕಾಂಗ್ರೆಸ್ ಸೇರುತ್ತಿದ್ದೇನೆ ಎಂದು ನಿಶಾ ಯೋಗೇಶ್ವರ್ ಸ್ಪಷ್ಟಪಡಿಸಿದ್ದಾರೆ.

**ಯಾರೂ ಚನ್ನಪಟ್ಟಣ ಅಭಿವೃದ್ಧಿ ಮಾಡಿಲ್ಲ:** ನಾನು ಕಾಂಗ್ರೆಸ್ ಸೇರುತ್ತಿರುವುದರ ಹಿಂದೆ ಚನ್ನಪಟ್ಟಣದ ಅಭಿವೃದ್ಧಿಯೇ ಮುಖ್ಯ ಕಾರಣ. ಎಲ್ಲರೂ ಚನ್ನಪಟ್ಟಣದ ಅಭಿವೃದ್ಧಿ ಬಗ್ಗೆ ಮಾತನಾಡುತ್ತಾರೆ. ಆದರೆ, ಚನ್ನಪಟ್ಟಣದಲ್ಲಿ ಅಭಿವೃದ್ಧಿ ಏನೂ ಆಗಿಲ್ಲ. ಉದ್ಯೋಗ ಸಮಸ್ಯೆ ಸಾಕಷ್ಟಿದೆ. ನಾಲ್ಕೈದು ಕಂಪನಿಗಳನ್ನು ತರಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

### ಚನ್ನಪಟ್ಟಣದಿಂದ ಸ್ಪರ್ಧಿಸಲು ಸಿದ್ಧ



ಕಾಂಗ್ರೆಸ್‌ನಿಂದ ಬೆಂಬಲ ಸಿಕ್ಕರೆ, ಟಿಕೆಟ್ ಸಿಕ್ಕರೆ ನಾನು ಕಾಂಗ್ರೆಸ್‌ನಿಂದಲೇ ಸೇವೆ ಮಾಡುತ್ತೇನೆ ಎಂದು ಹೇಳುವ ಮೂಲಕ ಬಿಜೆಪಿ ನಾಯಕ ಸಿ.ಪಿ.ಯೋಗೇಶ್ವರ್‌ಪುತ್ರಿ ನಿಶಾಯೋಗೇಶ್ವರ್ ಚನ್ನಪಟ್ಟಣ ಉಪಚುನಾವಣೆಗೆ ಸ್ಪರ್ಧೆಮಾಡುವ ಸುಳಿವು ನೀಡಿದ್ದಾರೆ. ಚನ್ನಪಟ್ಟಣ ಹಾಲಿ ಶಾಸಕ ಎಚ್.ಡಿ.ಕುಮಾರಸ್ವಾಮಿ ಮಂಡ್ಯದಿಂದ ಲೋಕಸಭೆಗೆ ಸ್ಪರ್ಧೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಚನ್ನಪಟ್ಟಣ ಉಪಚುನಾವಣೆಗೆ ಸಂಬಂಧಿಸಿದಂತೆ ಚರ್ಚೆ ಆರಂಭಗೊಂಡಿದೆ. ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಯೋಗೇಶ್ವರ್ ಕಣಕ್ಕಿಳಿಯಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿರುವ ಬೆನ್ನಲ್ಲೇ ನಿಶಾಯೋಗೇಶ್ವರ್ ಹೇಳಿಕೆ ಸಾಕಷ್ಟು ಕುತೂಹಲ ಕೆರಳಿಸಿದೆ.

# ಪಕ್ಷದ ನಿರ್ಧಾರಕ್ಕೆ ಬದ್ಧ: ಸಚಿವ




• **ಕನ್ನಡಪ್ರಭ ವಾರ್ತೆ** ದೇವನಹಳ್ಳಿ

ನಾನು ಮೊದಲಿಂದ ಹೇಳುತ್ತಾ ಬಂದಿದ್ದೇನೆ, ಪ್ರಯತ್ನ ಮಾತ್ರ ನಮ್ಮದು ಕಾಂಗ್ರೆಸ್ ಹೈಕಮಾಂಡ್ ಯಾರಿಗೇ ಟಿಕೆಟ್ ನೀಡಿದರೂ ನಾನುಸ್ವಾಗತಿಸುತ್ತೇನೆಎಂದುಹಿಂದಿನಿಂದಲೂ ಹೇಳುತ್ತಿದ್ದೇನೆ ಎಂದು ಸಚಿವ ಕೆ. ಹೆಚ್. ಮುನಿಯಪ್ಪ ಹೇಳಿದರು.ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ. ಹೆಚ್ ಮುನಿಯಪ್ಪ ಅವರು, ಕೇರಳದ ಕೊಚ್ಚಿಯಲ್ಲಿಎಐಸಿಸಿ ಪ್ರಧಾನ ಕಾಯರ್ದರ್ಶಿ ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನನಿಲ್ದಾಣಕ್ಕೆವಾಪಸ್ಸಾದಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ಬಂದಾಗ ನಾವೆಲ್ಲರೂ ಸಹಕರಿಸಬೇಕು ಎಂದು ಹೇಳಿದರು. ನನ್ನ30 ವರ್ಷದರಾಜಕೀಯದಲ್ಲಿ ಇಂತಹ ಪರಿಸ್ಥಿತಿಗಳು ಬಹಳಷ್ಟು ಬಾರಿ ಬಂದಿದೆ. ಇವೆಲ್ಲ ರಾಜಕೀಯದಲ್ಲಿ ಸಹಜ. ಕಾಂಗ್ರೆಸ್ ಪಕ್ಷ ಒಂದು ನಿಲುವು ತೆಗೆದುಕೊಂಡಾಗ ಅದಕ್ಕೆ ಬದ್ಧರಾಗಿ ಕೆಲಸ ಮಾಡಿ ಪಕ್ಷವನ್ನು ಗೆಲ್ಲಿಸುವುದೇ ನಮ್ಮ ಗುರಿ. ನನಗೆ ಯಾವುದೇ ರೀತಿಯ ಬೇಸರವಿಲ್ಲ. ಇಲ್ಲಿ ಸ್ವಪ್ರತಿಷ್ಠೆಗಳಾವುವು ಇಲ್ಲ. ಪಕ್ಷ ಹೇಳಿದ ರಾಜ್ಯದ ಯಾವುದೇ ಕಡೆ ನಾವು ಚುನಾವಣಾ ಪ್ರಚಾರ ಮಾಡುತ್ತೇವೆ ಎಂದು ಹೇಳಿದರು.

ನಾನು ಚುನಾವಣೆಯಲ್ಲಿ ನಿಲ್ಲೋದಿಲ್ಲ ಎಂದು ತೀರ್ಮಾನ ಮಾಡಿದ್ದೇನೆ. ಅದರಂತೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಜನತೆಗೆ ಕೆಲವು ಆಶ್ವಾಸನೆ ಕೊಟ್ಟಿದ್ದೇನೆ. ಅದರಂತೆ ಕೆಲಸ ಮಾಡುತ್ತೇನೆ. ನಾನು ಮಾತು ಬದಲಾಯಿಸಲ್ಲ ಎಂದು ಹೇಳಿದರು.

# ಡಾ.ಸುಧಾಕರ್‌ಗೆ ಜೆಡಿಎಸ್ ಬೆಂಬಲ: ನಾರಾಯಣಸ್ವಾಮಿ



ದೇವನಹಳ್ಳಿ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ ಸುಧಾಕರ್‌ಗೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು ಬೆಂಬಲ ನೀಡಲಿದ್ದಾರೆ ಎಂದು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ತಿಳಿಸಿದರು.ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ಕಾರ್ಯಕರ್ತರಲ್ಲಿ ಏನೇ ಭಿನ್ನಾಭಿಪ್ರಾಯ ಇದ್ದರೂ ಪಕ್ಷದ ಮುಖಂಡರು ತೆಗೆದುಕೊಂಡ ತೀರ್ಮಾನದಂತೆ ನಡೆಯಬೇಕು. ಈ ಹಿಂದೆ ಕಾಂಗ್ರೆಸ್ ಜೊತೆ ಮೈತ್ರಿಯಾದಾಗ ಕೇವಲ ಮುಖಾಮುಖಿ ಆಗಿತ್ತೇ ಹೊರತು ಹೃದಯಗಳು ಒಂದಾಗಿರಲಿಲ್ಲ ಎಂದರು.ಜೆಡಿಎಸ್ ಪಕ್ಷದ ವರಿಷ್ಠ ಹೆಚ್.ಡಿ ದೇವೇಗೌಡ, ಕುಮಾರಣ್ಣರ ತೀರ್ಮಾನದಂತೆ ಎನ್‌ಡಿಎ ಪಕ್ಷದ ಅಭ್ಯರ್ಥಿ ಡಾ.ಸುಧಾಕರ್ ಬೆಂಬಲಿಸಲು ಮುಖ್ಯ ಕಾರಣವೆಂದರೆ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಕ್ಕೆ ಒಳ್ಳೆ ಹೆಸರು ತಂದಿದ್ದಾರೆ. ಅವರ ಆಡಳಿತಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಜಿಲ್ಲಾಧ್ಯಕ್ಷ ಬಿ.ಮುನೇಗೌಡ ಹೇಳಿದರು. ಏಪ್ರಿಲ್ ಒಂದನೇ ತಾರೀಖು ರಾಜ್ಯ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮತ್ತು ಡಾ.ಸುಧಾಕರ್ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚನೆಯಾಗಲಿದೆ ಎಂದು ಜಿಲ್ಲಾಧ್ಯಕ್ಷ ಬಿ.ಮುನೇಗೌಡ ಹಾಗೂ ತಾಲೂಕು ಜೆಡಿಎಸ್ ಅಧ್ಯಕ್ಷ ಆರ್.ಮುನೇಗೌಡ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಹಾಡೋನಹಳ್ಳಿ ಅಪ್ಪಯ್ಯಣ್ಣ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಪಟಾಲಪ್ಪ, ಚಿಕ್ಕನಾರಾಯಣಸ್ವಾಮಿ ವಕೀಲ ಮುನಿರಾಜು, ಕಾರ್ಯದರ್ಶಿ ರವೀಂದ್ರ ಇತರರಿದ್ದರು.

# ಬ್ಲಾಕ್‌ಮೇಲ್ ಮಾಡಿದ್ದ ಆರೋಪಿ ಬಂಧನ



ಕನಕಪುರ: ಹಣಕ್ಕಾಗಿ ಬ್ಲಾಕ್ ಮೇಲ್ ಮಾಡಿ ವ್ಯಕ್ತಿ ಸಾವಿಗೆ ಕಾರಣನಾಗಿದ್ದ ಯುವಕನನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಮೂಲದ ವಿಷ್ಣು(22) ಬಂಧಿತ ಆರೋಪಿ. ಬೆಂಗಳೂರಿನ ಬಸವೇಶ್ವರ ಕಾಲೇಜಿನ ಬಿಕಾಂ ವಿದ್ಯಾರ್ಥಿ. ಮಾ.9ರಂದು ಟಿ.ಬೇಕುಪ್ಪೆ ಗ್ರಾಮದ ಬಳಿ ಅರ್ಕಾವತಿ ನದಿಗೆ ಹಾರಿ ಮೃತಪಟ್ಟಿದ್ದ ಮುತ್ತುರಾಜು ಆತ್ಮಹತ್ಯೆಗೆ ಕಾರಣನಾಗಿದ್ದ ಆರೋಪಿ ವಿಷ್ಣುವನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ವಿಷ್ಣು, ಬೆಂಗಳೂರಿನ ತನ್ನ ಸಹೋದರಿಯ ಮನೆಯಲ್ಲಿದ್ದು ಬಸವೇಶ್ವರ ಕಾಲೇಜಿನಲ್ಲಿ ಬಿಕಾಂ ವ್ಯಾಸಂಗ ಮಾಡುತ್ತಿದ್ದ. ಈತ ಫೇಸ್ ಬುಕ್ ಅಕೌಂಟ್ ತೆರೆದು ನಾನು ಜ್ಯೋತಿಷಿ, ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕೊಡುವುದಾಗಿ ಪೋಸ್ಟ್ ಹಾಕಿಕೊಂಡಿದ್ದ. ಟಿ.ಬೇಕುಪ್ಪೆ ಬಳಿ ಪ್ಲೇನಿಂಗ್ ಮಿಲ್ ನಡೆಸುತ್ತಿದ್ದ ಮುತ್ತುರಾಜು, ವಿಷ್ಣು ಹಾಕಿಕೊಂಡಿದ್ದ ಫೇಸ್ಬುಕ್ ಪೋಸ್ಟ್ ನಂಬಿ ತನ್ನ ಸಮಸ್ಯೆಗಳಿವೆ. ಪರಿಹಾರ ಕೊಡಿ ಎಂದು ಪರಿಚಯ ಮಾಡಿಕೊಂಡಿದ್ದ. ಮುತ್ತುರಾಜು ಮತ್ತು ಅವರ ಕುಟುಂಬದ ಭಾವಚಿತ್ರಗಳು, ಹಣ ಪಡೆದುಕೊಂಡಿದ್ದ. ಅದಾದ ಬಳಿಕ ಅತ್ತೆ ಮತ್ತು ಅಳಿಯನಿಗೂ ಅಕ್ರಮ ಸಂಬಂಧವಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುತ್ತೇನೆಂದು ಬೆದರಿಸುತ್ತಿದ್ದ ಇದರಿಂದ ಮನನೊಂದು ಮುತ್ತುರಾಜು ಮಾ. 9ರಂದು ಅರ್ಕಾವತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡಿ ಆರೋಪಿ ವಿಷ್ಣುವನ್ನು ಬಂಧಿಸಿದ್ದಾರೆ.

**PUBLIC NOTICE**

**LOST TITLE OF DOCUMENT**

My client Kiran N.S S/o N.P. Subbarayappa, Aged about 43, Residing at 3rd Cross, 1st Main, Byregowda Nagara, Kolar. Being the GPA Holder of the SCHEDULE PROPERTY, the schedule property purchased by Shaik Jaheer Ahmad & Others They sold this property to Manjunatha Yaligowda Sale Deed Dated-04/01/2006 Document No. HSK-1-04006-2005-06, CD No. HSKD51, Book No-01, GPA & Sale Agreement holder is Kiran N S (Document No. 744/2015-16) Dated-18/12/2015, Sale Agreement No. 8472/15-16 dated 18/12/2015 & Katha, That My Client also lost all this Document, That my client have already lodged the police complaint in this Registered on date: 01/07/2023 GSC No. P00253230600583. It is requested to the find of original documents to deliver the same to the undersigned or to my client against suitable reward. Further it is also caution the general public for not dealing with schedule property on the basis of his lost Sale deed, Sale Agreement, GPA & Katha.

**SCHEDULE PROPERTY**

All that piece and parcel of immovable old Property bearing Janjuru No. 753, Assessment No. 105/1, New Site No-61, Khatha Number-753/598/105/1/61, situated at Kanurahalli Village, Kasaba Hobli, Hoskote Taluk, Bangalore Rural District. measuring East to West :46 feet, and North to South 30 feet, in all measuring 1380 sq.ft.

East by : Site No-38, West by : 20 feet Road, North by : Site No-60 & South, by : Site No-35 & 34.

**Srinivasa S.N,** Advocate
No.30, 1st Floor, 5th Main Road, Gandhinagar, Bengaluru-560009. Ph.No. 9535265454

**CAUTION** - Readers are advised to make appro-priate enquiries while responding to advertisements in these columns. Kannada Prabha Publications Ltd., does not vouch for any claims made by the advertisers. The Printer, Publisher, Editor and Owner of Kannada Prabha Publications Ltd., shall not be held responsible/liable for any consequences, in case such claims are found to be false.

**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ನಿಗದಿತ ವಾಣಿಜ್ಯ ಬ್ಯಾಂಕ್)

**ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು-560071.**

**ಇ-ಹರಾಜು ಸೂಚನೆ**

**ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು,2002ರ ನಿಯಮ 8(6) ಮತ್ತು 9 ರ ನಿಬಂಧನೆಯೊಂದಿಗೆ ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.**

ಸರ್ಫೇಸಿ ಕಾಯಿದೆಯ ಸೆಕ್ಷನ್ 13(4) ಅಡಿಯಲ್ಲಿ **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**ನ ಅಧಿಕೃತ ಅಧಿಕಾರಿಯಾಗಿ ಕೆಳಸಹಿದಾರರು ಅಧಿಕಾರಗಳನ್ನು ಚಲಾಯಿಸುವ ಮೂಲಕ ಈ ಕೆಳಗಿನ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಬ್ಯಾಂಕಿಗೆ ಬರಬೇಕಾದ ಬಾಕಿಗಳನ್ನು ಸಾರ್ವಜನಿಕರಿಗೆ ಮತ್ತು ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಲಾದ ಅಡಮಾನ ಇಟ್ಟಿರುವ ಸ್ವತ್ತುಗಳನ್ನು ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ **"ಎಲ್ಲಿ ಹೇಗಿದೆಯೋ ಹಾಗೆ"** ಮತ್ತು **"ಎಲ್ಲಿ ಏನಿದೆಯೋ ಹಾಗೆ"** ಈ ಕೆಳಗೆ ನಿಗದಿಪಡಿಸಿದ ದಿನಾಂಕಂದು ಹರಾಜು ಮಾಡಲಾಗುತ್ತದೆ.

| ಕ್ರ ಸಂ | ಸಾಲದ ಖಾತೆ ಸಂಖ್ಯೆ | ಸಾಲಗಾರರ/ಸಹ-ಸಾಲಗಾರರು/ ಜಾಮೀನುದಾರರ ಮೂಲ ಹೆಸರು | ಸೂಚನೆ ದಿನಾಂಕ 13-2 ದಂದು | ಸ್ವಾಧೀನ ದಿನಾಂಕ | 18.02.2024 ರಂದು ಇದ್ದಂತೆ ಪ್ರಸ್ತುತ ಬಾಕಿ ಮೊತ್ತ | ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ | ಐಎನ್‌ಆರ್ ಗಳಲ್ಲಿ ಮೀಸಲು ಬೆಲೆ | ಮುಂಗಡ ಠೇವಣಿ (ಐಎನ್‌ಆರ್) | ಇ-ಹರಾಜಿನ ದಿನಾಂಕ ಮತ್ತು ಸಮಯ | ಬಿಡ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ ಮತ್ತು ಸ್ಥಳ |
|---|---|---|---|---|---|---|---|---|---|---|
| 1 | 46989440000112 | 1) ಶ್ರೀ ಕುಮಾರ ನಾಯ್ಕ್, ಹಾಗೂ : ಮೆ॥ ಜೈ ಭಜರಂಗಿ ಕಾಂಡಿಮೆಟ್ಸ್, ಇದರ ಪ್ರತಿನಿಧಿಸುವ ಮಾಲೀಕರು : ಶ್ರೀ ಕುಮಾರ ನಾಯ್ಕ್ 2) ಶ್ರೀಮತಿ ಲಕ್ಷ್ಮೀ ಬಾಯಿ | 13.04.2023 | 09.02.2024 | ರೂ.5,39,083.03 (ರೂಪಾಯಿ ಐದು ಲಕ್ಷದ ಮೂವತ್ತೊಂಭತ್ತು ಸಾವಿರದ ಎಂಭತ್ತ ಮೂರು ಮತ್ತು ಮೂರು ಪೈಸೆ ಮಾತ್ರ) | 05.04.2024 ರಂದು ಬೆಳಿಗ್ಗೆ 9:30 ರಿಂದ ಸಂಜೆ 05:00 ಗಂಟೆಯ ವರೆಗೆ | ರೂ. 10,13,000/- (ರೂಪಾಯಿ ಹತ್ತು ಲಕ್ಷದ ಹದಿಮೂರು ಸಾವಿರ ಮಾತ್ರ) | ರೂ.1,01,300/- (ರೂಪಾಯಿ ಒಂದು ಲಕ್ಷದ ಒಂದು ಸಾವಿರದ ಮುನ್ನೂರು ಮಾತ್ರ) | 16.04.2024 ಮಧ್ಯಾಹ್ನ 02.00 ಗಂಟೆಗೆ | ದಿನಾಂಕ : 15.04.2024, ರಂದು ಸಂಜೆ 5.00 ಗಂಟೆಯ ವರೆಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್, ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚೆಲ್ಲಘಟ್ಟ, ಬೆಂಗಳೂರು-560071. |
| | **ಸುರಕ್ಷಿತ ಸ್ವತ್ತಿನ ವಿವರ:** ಆಸ್ತಿಯ ನಿವೇಶನ ನಂ.24, ಖಾತಾ ನಂ.454/3298/5584/24/322, ಖಾತಾ ಕ್ರ. ಸಂ.454, ಹಳೆಯ ಖಾತಾ ನಂ.3298/5584/24/322, ರೋಜಿಪುರ ಗ್ರಾಮ, 4ನೇ ಹಂತ ದೊಡ್ಡಬಳ್ಳಾಪುರ ಪಟ್ಟಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮತ್ತು **ಚಕ್ಕುಬಂದಿ : ಪೂರ್ವಕ್ಕೆ :** ನಿವೇಶನ ನಂ.23, **ಪಶ್ಚಿಮಕ್ಕೆ :** ನಗರಸಭಾ ಆಸ್ತಿ, ಉತ್ತರಕ್ಕೆ : ನಿವೇಶನ ನಂ.17, **ದಕ್ಷಿಣಕ್ಕೆ :** ರಸ್ತೆ, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 25 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ. | | | | | | | | | |

ಸ್ವತ್ತುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" 'ಆನ್ ಲೈನ್'ನಲ್ಲಿ ಇ-ಹರಾಜು ನಡೆಸಲಾಗುವುದು. ಬ್ಯಾಂಕಿನ ಅನುಮೋದಿತ ಸೇವಾದಾರರಾದ **ಮೆ॥ 4 ಕ್ಲೋಸರ್‌ನ ವೆಬ್‌ಸೈಟ್ https://bankauctions.in & www.foreclosureindia.com** ಪೋರ್ಟಲ್‌ನಲ್ಲಿ ಹರಾಜು ನಡೆಸಲಾಗುವುದು. ನಿರೀಕ್ಷಿತ ಬಿಡ್ದಾರರು ಸಂಪರ್ಕಿಸಬಹುದು, ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ಸಹಾಯ, ವಿಧಾನ ಮತ್ತು ಇ-ಹರಾಜಿನ ಆನ್‌ಲೈನ್ ತರಬೇತಿಗಾಗಿ **ಮೆ॥ 4 ಕ್ಲೋಸರ್, ಶ್ರೀ ಶ್ರೀನಿವಾಸುಲು, ಸಂಪರ್ಕ ಸಂಖ್ಯೆ: 8142000809.**

**ಇಮೇಲ್ ಐಡಿ: info@bankauctions.in/ srinivas@bankauctions.in** ಇವರನ್ನ ಸಂಪರ್ಕಿಸಬಹುದು.

ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ವಿವರಗಳಿಗಾಗಿ ಮತ್ತು ಆಸ್ತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗೆ ದಯವಿಟ್ಟು **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಅಧಿಕೃತ ಅಧಿಕಾರಿಗಳು, ಶ್ರೀ ರಂಜನ್ ನಾಯಕ್ (ಮೊ.ಸಂ.9590858249), ಶ್ರೀ ಉಮೇಶ್ (ಮೊ.ಸಂ.8050149617) ಮತ್ತು ಶ್ರೀಮತಿ ಸಯೀದಾ (ಮೊ.ಸಂ.7400445147)** ಅಧಿಕೃತ ಅಧಿಕಾರಿಯವರ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗಾಗಿ ಇವರನ್ನ ಸಂಪರ್ಕಿಸಬಹುದು, ಆಸ್ತಿಗಳ ಮೇಲೆ ಯಾವುದೇ ಹೊರೆಗಳಿಲ್ಲ. ಆದಾಗ್ಯೂ ಉದ್ದೇಶಿತ ಬಿಡ್‌ದಾರರು ಹೊರೆಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ವಿಚಾರಣೆಗಳನ್ನು ಮಾಡಬೇಕು. ತಮ್ಮ ಬಿಡ್ ಸಲ್ಲಿಸುವ ಮೊದಲು ಇರಿಸಲಾದ ಆಸ್ತಿಯ ಶೀರ್ಷಿಕೆ. ತಮ್ಮ ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಶೀರ್ಷಿಕೆಯನ್ನು ಹೊಂದಿರಬೇಕು, ಯಾವುದೇ ಷರತ್ತುಬದ್ಧ ಬಿಡ್ ಅನ್ನು ಸ್ವೀಕರಿಸಲಾಗುವುದಿಲ್ಲ. ಅಡಮಾನದ ಆಸ್ತಿಗಳಿಗೆ ನಿಗದಿಪಡಿಸಲಾದ ಇ-ಹರಾಜಿನ ಕುರಿತು ಮೇಲೆ ತಿಳಿಸಲಾದ ಸಾಲಗಾರರು/ಜಾಮೀನುದಾರರು/ ಅಡಮಾನದಾರರಿಗೆ ಈ ಸೂಚನೆಯನ್ನು ನೀಡಲಾಗಿದೆ. ಸಾಲಗಾರರು /ಜಾಮೀನುದಾರರು / ಅಡಮಾನದಾರರಿಗೆ ಹರಾಜಿನ ದಿನಾಂಕದ ಮೊದಲು ಬಡ್ಡಿ ಮತ್ತು ಎಲ್ಲಾ ವೆಚ್ಚಗಳೊಂದಿಗೆ ಮೇಲೆ ತಿಳಿಸಿದಂತೆ ಮೊತ್ತವನ್ನು ಪಾವತಿಸಬೇಕು, ಒಂದು ವೇಳೆ ಉಳಿದಿರುವ ಬಾಕಿ ಮೊತ್ತ ಖರ್ಚು ವೆಚ್ಚಗಳನ್ನು ಮರುಪಾವತಿಸಲು ವಿಫಲರಾದರೆ ಆಸ್ತಿಯನ್ನು ಮಾರಾಟ ಮಾಡಲಾಗುವುದು ಎಂದು ಈ ಸೂಚನೆ ಮೂಲಕ ನೀಡಲಾಗುತ್ತದೆ.

**ದಿನಾಂಕ: 31.03.2024, ಸ್ಥಳ: ಬೆಂಗಳೂರು ಗ್ರಾಮಾಂತರ**
**ಸಹಿ/- ಅಧಿಕೃತ ಅಧಿಕಾರಿಗಳು, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**